# ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ ಅತ್ಯಗತ್ಯ

ಬೆಂಗಳೂರು :ನವೆಂಬರ್ 09,2005

ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ ದೊರೆಯುವುದು ಅತ್ಯಗತ್ಯವಾಗಿದೆ ಎಂದು ಕೇಂದ್ರ ಯೋಜನಾ ಖಾತೆಯ ರಾಜ್ಯ ಸಚಿವರಾದ ಶ್ರೀ ಎಂ . ವಿ . ರಾಜಶೇಖರನ್ ಇಂದು ಇಲ್ಲಿ ತಿಳಿಸಿದ್ದಾರೆ . ಕೇಂದ್ರೀಯ ಸದನದ ಕನ್ನಡ ಸಂಘ ಏರ್ಪಡಿಸಿದ್ದ ಸುವರ್ಣ ಕರ್ನಾಟಕ ರಾಜ್ಯೋತ್ಸವ ಸಮಾರಂಭವನ್ನು ಉದ್ಘಾಟಿಸಿ ಅವರು ಇಂದು ಇಲ್ಲಿ ಮಾತನಾಡುತ್ತಿದ್ದರು . ಕನ್ನಡದ ಸಾಹಿತಿಗಳಿಗೆ ಅತಿ ಹೆಚ್ಚಿನ ಜ್ಞಾನ ಪೀಠ ಪ್ರಶಸ್ತಿಗಳು ಲಭಿಸಿದ್ದು ಕನ್ನಡ ಸಾಹಿತ್ಯದ ಸೃಜನಶೀಲತೆ ವಿಶ್ವದ ಅನ್ಯ ಸಾಹಿತ್ಯ ಪ್ರಕಾರಗಳಿಗೆ ಸ್ಫೂರ್ತಿ ನೀಡಿವೆ ಎಂದು ಸಚಿವರು ತಿಳಿಸಿದರು . ಕನ್ನಡ ಭಾಷೆಗೆ 1500 ರಿಂದ 2000 ವರ್ಷಗಳ ಇತಿಹಾಸವಿದ್ದು ಶಾಸ್ತ್ರೀಯ ಭಾಷೆ ಎಂಬ ಉಪಾದಿ ಗಳಿಸುವ ಎಲ್ಲಾ ಅರ್ಹತೆಯಿದೆ ಎಂದು ಅವರು ಪ್ರತಿಪಾದಿಸಿದರು .

ಸ್ವತಂತ್ರ ಹೋರಾಟಗಾರ ಶ್ರೀ ಎಚ್ ಎಸ್ ದೊರೆಸ್ವಾಮಿ ಮಾತನಾಡುತ್ತ ದೇಶದ ಅನಿವೃದ್ಧಿಗಾಗಿ ಕನ್ನಡಿಗರು ಸೇವಕರಾಗಿ ದುಡಿಯಬೇಕು ಎಂದು ನುಡಿದರು . ದೇಶ ಸೇವೆ ಭಗವಂತನ ಸೇವೆ ಎಂದು ಅವರು ತಿಳಿಸಿದರು . ಕೇಂದ್ರ ಲೋಕೋಪಯೋಗಿ ಇಲಾಖೆಯ ಮುಖ್ಯ ಅಭಯಂತರರಾದ ಶ್ರೀ ಎಸ್ ಚಿನ್ನಸ್ವಾಮಿ ತಮ್ಮ ಅದ್ಯಕ್ಷೀಯ ಭಾಷಣದಲ್ಲಿ ಮಾತನಾಡುತ್ತ ಕೇಂದ್ರ ಸರ್ಕಾರಿ ನೌಕರರಿಗೆ ವಸತಿ ಸಮುಚ್ಛಯ ನಿರ್ಮಿಸಲು ಕೇಂದ್ರ ಲೋಕೋಪಯೋಗಿ ಇಲಾಖೆ ಪ್ರಸ್ತಾಪಿಸಿದ್ದು ಇದಕ್ಕಾಗಿ ಹಣದ ಪೂರೈಕೆಯನ್ನು ಕೇಂದ್ರ ಸರ್ಕಾರ ಮಾಡುವಂತೆ ಸಚಿವರಲ್ಲಿ ಅವರು ಕೋರಿಕೊಂಡರು .

ಖ್ಯಾತ ಕನ್ನಡ ಸಾಹಿತಿ ಡಾ. ಎಚ್ ಎಂ ಮರುಳ ಸಿದ್ಧಯ್ಯ , ಖ್ಯಾತ ಚಿತ್ರನಟಿ ಶ್ರೀಮತಿ ಪ್ರಮಿಳ ಜೋಷಾಯಿ ,ಖ್ಯಾತ ಸಾಹಿತಿ ತಜ್ಞ ಡಾ. ಎಚ್ ಎಸ್ ಗೋಪಾಲ ರಾವ್ ಹಾಗೂ ಕನ್ನಡ ಸಂಸ್ಥೆಗಳ ಮುಖ್ಯಸ್ಥರು ಈ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

******

ಅದ: ಪಚ:ಸು: ಆ:ಕ: ಬೆಂ:16:40 09–11–2005